**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ.15**

**ಚಾ.ಸಾ.25**

| | | |
|---|---|---|
| ಸಾಕ್ಷಿದಾರರ ಹೆಸರು | - | ಬಾಲಕೃಷ್ಣ |
| ತಂದೆಯ ಹೆಸರು | - | ಚಂದು ನಾಯ್ಕ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ಎಚ್ .ಸಿ. 1159 |
| ವಿಳಾಸ | - | ಕಾರ್ಕಳ ಪೋಲಿಸ್ ಉಪಾಧೀಕ್ಷಕರ ಕಚೇರಿ |

ದಿನಾಂಕಃ 06-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2015 ಜನವರಿ ಯಿಂದ 2022 ಫೆಬ್ರವರಿವರೆಗೆ ಉಡುಪಿ ವೃತ್ತ ನಿರೀಕ್ಷಕ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನ್ನ ಬಳಿ ವಿವೋ ಕಂಪೆನಿಯ ಮೊಬೈಲ್ ಫೋನ್ ಇದೆ. ಈ ಪ್ರಕರಣದ ತನಿಖೆಯ ಸಮಯದಲ್ಲಿ ತನಿಖಾಧಿಕಾರಿಯ ಸೂಚನೆಯಂತೆ, ಆರೋಪಿತರ ಹೇಳಿಕೆಯ ಆಧಾರದ ಮೇಲೆ ಘಟನಾ ಸ್ಥಳದ ಮಹಜರು ಹಾಗೂ ಸೊತ್ತು ಸ್ವಾಧೀನತಾ ಮಹಜರು ಬರೆದಾಗ ಹಾಜರಿದ್ದು ಸಹಿ ಮಾಡಿ ಛಾಯಾ ಚಿತ್ರಗಳನ್ನು ಮೊಬೈಲ್ ಹಾಗೂ ಕ್ಯಾಮರಾದಲ್ಲಿ ತೆಗೆದು ತನಿಖಾಧಿಕಾರಿಗೆ ನೀಡಿ ಕಲಂ 65 ಬಿ ಸಾಕ್ಷ್ಯ ಅಧಿನಿಯಮದಡಿ ದೃಢೀಕರಣ ಪತ್ರವನ್ನು ನೀಡಿದ್ದು ಅದನ್ನು ಈಗಾಗಲೇ ನಿಪಿ.42 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ42(ಎ) ಎಂದು ಗುರುತಿಸಲಾಯಿತು. ಮಹಜರಿನಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.18(ಸಿ) ಹಾಗೂ ನಿಪಿ.14(ಇ) ಎಂದು ಗುರುತಿಸಲಾಯಿತು.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಪಿ.ಎನ್. ವಕೀಲರಿಂದಃ**

ನಾನು ತೆಗೆದ ಫೋಟೋಗಳು ಕೃತ್ಯ ಸ್ಥಳ ಹಾಗೂ ಸೊತ್ತು ಸ್ವಾಧೀನತಾ ಸ್ಥಳದ ಫೋಟೋಗಳು ಅಲ್ಲ ಎಂದರೆ ಸರಿಯಲ್ಲ. ಫೋಟೋಗಳಲ್ಲಿ ದಿನಾಂಕ ಮತ್ತು ಸಮಯ

ನಮೂದಾಗಿರುವುದಿಲ್ಲ. ದೃಢೀಕರಣ ಪತ್ರದಲ್ಲಿ ಯಾವ ಗಣಕಯಂತ್ರದ ಮೂಲಕ ಪ್ರಿಂಟ್ ಔಟ್ ತೆಗೆಯಲಾಗಿದೆ ಎಂದು ನಮೂದಿಸಿಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಇಬ್ಬರು ಪಂಚರು ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಅವರ ಹೆಸರು ನೆನಪಿಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.